

# ಸಿಹಿ ಸಿಹಿ ಕ್ರಿಸ್ಮಸ್ ಮರ



ಕ್ರಿಸ್ಮಸ್ ಹಬ್ಬದಂದು ಕ್ರಿಶ್ಚಿಯನ್ನರು ತಮ್ಮ ಮನೆಗಳಲ್ಲಿ ಕ್ರಿಸ್ಮಸ್ ಮರ ತಂದಿಟ್ಟು ಅದನ್ನು ವಿಧ ವಿಧವಾಗಿ ಅಲಂಕರಿಸುತ್ತಾರೆ. ಆದರೆ ಫ್ರೆಂಚ್ ದೇಶದ ಚಾಕೊಲೇಟ್ ತಯಾರಿಕಾ ನಿಪುಣನೊಬ್ಬ ಬರೊಬ್ಬರಿ 32 ಅಡಿಗಳಷ್ಟು ಎತ್ತರದ ಕ್ರಿಸ್ಮಸ್ ಮರವನ್ನು ಪೂರ್ತಿ ಚಾಕೊಲೇಟ್‌ನಿಂದಲೇ ನಿರ್ಮಿಸಿ ಗಿನ್ನೆಸ್ ದಾಖಲೆ ನಿರ್ಮಿಸಿದ್ದಾನೆ.

ಪ್ಯಾಟ್ರಿಕ್ ರೋಜರ್ ಎಂಬಾತ, ನರರೋಗ ಪೀಡಿತರಿಗೆ ದೇಣಿಗೆ ಸಂಗ್ರಹಿಸಲೆಂದು ಈ ಚಾಕೊಲೇಟ್ ಕ್ರಿಸ್ಮಸ್ ಮರ ತಯಾರಿಸಿದ್ದಾನೆ. ಪ್ಯಾರಿಸ್‌ನ ದಕ್ಷಿಣಭಾಗದಲ್ಲಿರುವ ಚಾಕೊಲೇಟ್ ಫ್ಯಾಕ್ಟರಿಯಲ್ಲಿ, ಇಷ್ಟು ದೊಡ್ಡ ಗಾತ್ರದ ಚಾಕೊಲೇಟ್ ಮರ ಸಿದ್ಧಪಡಿಸಲು ಪ್ಯಾಟ್ರಿಕ್ ರೋಜರ್ ಹಾಗೂ ಆತನ ತಂಡದವರು ಒಂದು ತಿಂಗಳ ಕಾಲ ಶ್ರಮಪಟ್ಟಿದ್ದಾರೆ.

ಈ ಕಲಾವಿದ ಹೇಳುವ ಪ್ರಕಾರ, ಇಷ್ಟು ಎತ್ತರದ ಮರವನ್ನು ಚಾಕೊಲೇಟ್‌ನಲ್ಲಿ ತಯಾರಿಸುವುದು ಕಠಿಣ ಸವಾಲು. ಏಕೆಂದರೆ ಎತ್ತರದ ಒತ್ತಡವನ್ನು ತಡೆದುಕೊಳ್ಳಲು ಮರ ಸಾಕಷ್ಟು ಗಟ್ಟಿಮುಟ್ಟಾಗಿರಬೇಕಾಗುತ್ತದೆ.

ಈ ವಿಶೇಷ ಕ್ರಿಸ್ಮಸ್ ಮರವನ್ನು 8,000 ಪೌಂಡ್ (ಸುಮಾರು ನಾಲ್ಕು ಟನ್)ನಷ್ಟು ಚಾಕೊಲೇಟ್ ಬಳಸಿ ನಿರ್ಮಿಸಲಾಗಿದೆ. ರುಚಿಕರವಾದ ಈ ಭಾರೀ ಗಾತ್ರದ ಚಾಕೊಲೇಟ್ ಕ್ರಿಸ್ಮಸ್ ಮರ ರೋಜರ್ ನ ಕಲಾನೈಪುಣ್ಯಕ್ಕೆ ಸಾಕ್ಷಿಯಾಗಿದೆ. ಇದರ ಪ್ರದರ್ಶನದಿಂದ ಸಂಗ್ರಹಗೊಂಡ ಹಣವನ್ನು ನರರೋಗದಿಂದ ನರಳುವವರ ಚಿಕಿತ್ಸೆಗೆ ದೇಣಿಗೆಯಾಗಿ ನೀಡಲಾಗಿದೆಯಂತೆ.

ಇದು ಅತ್ಯಂತ ಎತ್ತರದ ಚಾಕೊಲೇಟ್ ಕ್ರಿಸ್ಮಸ್ ಮರ ಎಂಬ ಗಿನ್ನೆಸ್ ದಾಖಲೆಯ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಕ್ಕೂ ಮುನ್ನ ಅಲೆನ್ ರೂಬೆ ಎಂಬಾತ ನಿರ್ಮಿಸಿದ 22 ಅಡಿ ಎತ್ತರದ ಚಾಕೊಲೇಟ್ ಕ್ರಿಸ್ಮಸ್ ಟ್ರೀ ಗಿನ್ನೆಸ್ ದಾಖಲೆ ನಿರ್ಮಿಸಿತ್ತು.

■ ವಿದ್ಯಾ ವಿ. ಹಾಲಭಾವಿ

